ಸೇತುವೆ & ನಿರೀಕ್ಷಣ ಮಂದಿರಗಳು

1021 (1384) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಯ ಬಬಲೇಶ್ವರ ಮತಕ್ಷೇತ್ರದಲ್ಲಿ 2009–10ನೇ ಸಾಲಿನಲ್ಲಿ ಕೈಗೊಂಡಿರುವ ಸೇತುವೆಗಳ ಸಂಖ್ಯೆ ಎಷ್ಟು (ಪೂರ್ಣ ಮಾಹಿತಿಯನ್ನು ಒದಗಿಸುವುದು);

ಆ) ವಿಜಾಪುರ ಜಿಲ್ಲೆಯಲ್ಲಿ ಹೊಸದಾಗಿ ನಿರ್ಮಿಸಲು ಉದ್ದೇಶಿಸಿರುವ ನಿರೀಕ್ಷಣಾ ಮಂದಿರಗಳೆಷ್ಟು, ಮತ್ತು ನವೀಕರಿಸುವ ನಿರೀಕ್ಷಣಾ ಮಂದಿರಗಳ ಸಂಖ್ಯೆ ಎಷ್ಟು (ವಿವರವಾದ ಮಾಹಿತಿಯನ್ನು ಒದಗಿಸುವುದು)?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಕೆ.ಆರ್.ಡಿ.ಸಿ.ಎಲ್. ವತಿಯಿಂದ ಬಬಲೇಶ್ವರ–ಕಾಕನಂಡಗಿ ಕಾರಜೋಳ ಜಿಲ್ಲಾ ಮುಖ್ಯರಸ್ತೆಯ ಕಿಮೀ. 5.80 ರಲ್ಲಿ ರೂ.146.80 ಲಕ್ಷಗಳ ಮೊತ್ತಕ್ಕೆ ಸೇತುವೆ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿರುತ್ತದೆ.

ಆ) 2009–10ನೇ ಸಾಲಿನ ಆಯವ್ಯಯದಲ್ಲಿ ಯಾವುದೇ ನಿರೀಕ್ಷಣ ಮಂದಿರಗಳ ಕಾಮಗಾರಿಗಳು ಸೇರ್ಪಡೆಗೊಂಡಿರುವುದಿಲ್ಲ. ಅನುದಾನ ಲಭ್ಯತೆ ಮೇಲೆ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ಹರಿಯಾಲಿ ಯೋಜನೆಗಳ ಅನುಷ್ಠಾನ

1022 (1385) ಶ್ರೀ ಪಾಟೀಲ್ ಎಂ.ಬಿ. (ಬಬಲೇಶ್ವರ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಲ್ಲಿಯವರೆಗೆ ಮಂಜೂರಾದ ಹರಿಯಾಲಿ ಯೋಜನೆಗಳೆಷ್ಟು?

(ಜಿಲ್ಲಾವಾರು ಮಾಹಿತಿ ನೀಡುವುದು)

ಆ) ಇದರಲ್ಲಿ ಪೂರ್ಣಗೊಂಡ ಯೋಜನೆಗಳ ಹಾಗೂ ಅಪೂರ್ಣವಾಗಿ ಉಳಿದಿರುವ ಯೋಜನೆಗಳ ಸಂಖ್ಯೆಯೆಷ್ಟು?

ಇ) ಯಾವ ಕಾರಣಕ್ಕಾಗಿ ಯೋಜನೆಗಳು ಪೂರ್ಣವಾಗಿ ಉಳಿದಿರುತ್ತದೆ?